ಶ್ರೀ ಜಿ. ಪಾಪಣ್ಣ.—ಒಂದು ವರ್ಷದ್ದು ಮಾತ್ರ ವಸೂಲು ಮಾಡಬೇಕೆಂದು ನಿಯಮವಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆ ರೀತಿ ಇಲ್ಲ.

ಶ್ರೀ ಜಿ. ಪಾಪಣ್ಣ.—ಎರಡು ವರ್ಷ ಸಸ್ಪೆಂಡ್ ಮಾಡಿರುವುದನ್ನು ವಸೂಲು ಮಾಡಿದರೆ ಕ್ಷಾಮ ಪರಿಹಾರ ನೀಡಿದ ಹಾಗಾಯಿತೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಮಳೆ ಬೆಳೆ ಚೆನ್ನಾಗಿದೆ. ಕೊಡುವುದಕ್ಕೆ ಸಾಧ್ಯವೆಂಬುದು ಸರ್ಕಾರದ ಅಭಿಪ್ರಾಯ.

ಶ್ರೀ ಜಿ. ಪಾಪಣ್ಣ.—ಕ್ಷಾಮ ಕಾಲದಲ್ಲಿ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಹಳೆಯ ಪಾತ್ರೆಗಳನ್ನು ಕೊಂಡುಕೊಳ್ಳಲು ಕೆಲವರು ಅಂಗಡಿಗಳನ್ನಿಟ್ಟಿದ್ದರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತಮ್ಮ ಜಿಲ್ಲೆಯಲ್ಲಿ ಅನೇಕ ಕಡೆ ಪ್ರವಾಸ ಮಾಡಿದ್ದೇನೆ. ಆದರೆ ಅಂಥ ಅಂಗಡಿ ನೋಡಲಿಲ್ಲ.

ಶ್ರೀ ಜಿ. ನಾರಾಯಣಗೌಡ.—ಕಂದಾಯ ಮಾಫಿ ಮಾಡಬೇಕಾದರೆ 2 ವರ್ಷ ಒಂದೇ ಸಮನಾಗಿ ಮಳೆ ಬೆಳೆಯಿಲ್ಲದಿರಬೇಕು. ಇಲ್ಲದಿದ್ದರೆ ಸಸ್ಪೆಂಡ್ ಮಾಡಿ ಔಟ್‌ರೈಟ್ ರೆಮಿಷನ್ ಕೊಡುವುದಿಲ್ಲವೆಂದು ಕಾನೂನಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಗೊತ್ತಿರುವ ಹಾಗೆ ಇಲ್ಲ.

ಶ್ರೀ ಜಿ. ನಾರಾಯಣಗೌಡ. 1924-25ನೆಯ ಸಾಲಿನಲ್ಲಿ ಹಾಗೆ ಕೊಟ್ಟಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್ ಬೇಕು. ವಿಚಾರಿಸುತ್ತೇನೆ.

Lift Irrigation and Power Supply

Q.—492. Sri N. HUCHMASTHY GOWDA (Huliyurdurga).

Will the Government be pleased to state :—

(*a*) the number of wells to which electricity has been supplied for lift irrigation in the State up to October 1947 (districtwar figures to be given) ;

(*b*) the number of wells provided with electricity from October 1947 to the end of 1952 (districtwar figures to be furnished) ;

(*c*) the number of wells that were provided with electricity during the year 1952-53 ;

(*d*) the number of wells that were provided with electricity during the year 1953-54 up to the end of December ;

(*e*) the subsidy received from the Central Government during the periods specified above, for this item ; and the amount provided by the State Government during these periods ?

A.—Dr. R. NAGAN GOWDA (Minister for Agriculture).—

	District		*Number of wells*
(*a*)	Bangalore	...	627
	Mysore	...	37
	Mandya	...	16
	Kolar	...	319
	Tumkur	...	29
	Chikmagalur	...	2
	Chitaldrug	...	50
	Shimoga	...	6
	Total	...	1,086
(*b*)	Bangalore	...	623
	Mysore	...	83
	Mandya	...	22
	Kolar	...	1,061
	Tumkur	...	164
	Chikmagalur	...	5
	Chitaldrug	...	290
	Shimoga	...	33
	Hassan	...	19
	Total	...	2,300
(*c*)	Bangalore	...	226
	Mysore	...	24
	Mandya	...	10
	Tumkur	...	202
	Kolar	...	288
	Chikmagalur	...	3
	Chitaldrug	...	172
	Hassan	...	10
	Shimoga	...	32
	Total	...	967
(*d*)	Bangalore	...	158
	Mysore	...	38
	Mandya	...	19
	Tumkur	...	181
	Kolar	...	172
	Chikmagalur	...	6
	Chitaldrug	...	120
	Shimoga	...	25
	Hassan	...	120
	Total	...	839

Note.—Figures for Bellary District have not been given as yearwise figures are not readily available. There were 80 wells provided with power supply on 1st October 1953 and estimates for supplying power to 31 wells have been sanctioned since then.

(DR. R. NAGAN GOWDA).

(e) No subsidy has been received from the Government of India. Loan assistance to the extent of 150 lakhs has been provided by them during the years 1951-52, 1952-53 and 1953-54. The amount provided by the State Government up to 1939-40 for this purpose is not readily ascertainable as no separate allocation for irrigation pumping sets was being made in the budget during that period. The amounts provided during the subsequent periods are given below :—

Period	*Amount in Rupees*
1939-40 to 1946-47 ...	3.352 lakhs
1947-48 to 1951-52 ...	132·93 do
1952-53	20·00 do
1953-54	25·00 do

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಅವಧಿಯಲ್ಲಿ ಕೇಂದ್ರ ಸರ್ಕಾರ ಕೊಟ್ಟ ಸಾಲವನ್ನೆಲ್ಲಾ ತಾವು ಉಪಯೋಗಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಎಲ್ಲಾ ಉಪಯೋಗ ಮಾಡಿದ್ದೇವೆ. 1953-54ರದು ಈಗ ಉಪಯೋಗ ದಲ್ಲಿದೆ, ಈ ವರ್ಷ ಜೂನ್‌ವರೆಗೆ ಅವಕಾಶವಿದೆ. ಅದರೊಳಗಾಗಿ ಉಪಯೋಗಿಸಲಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ಬಾಬಿಗೆ ಸಾಲ ಅಥವಾ ಗ್ರಾಂಟುಬೇಕೆಂದು ಕೇಂದ್ರ ಸರ್ಕಾರವನ್ನು ಕೇಳಿದ್ದೀರಾ ?

ಡಾ॥ ಆರ್. ನಾಗನಗೌಡ.—ಕೇಳಿದ್ದೇವೆ ; ಅವರು ಅದಕ್ಕೆ ಒಪ್ಪಿಲ್ಲ.

ಶ್ರೀ ಬಿ. ಹುಚ್ಚೇಗೌಡ.—1952-53 ಮತ್ತು 1953-54ನೆಯ ಸಾಲುಗಳಿಗೆ 45 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಸಹ ಎಲ್ಲಾ ಕಡೆಯೂ ಬಾವಿಗಳಿಗೆ ಹಣ ಡಿಪಾಜಿಟ್ ಮಾಡಿದ್ದರೂ ವಿದ್ಯುಚ್ಛಕ್ತಿಯನ್ನೊದಗಿಸದಿರಲು ಕಾರಣವೇನು ?

ಡಾ॥ ಆರ್. ನಾಗನಗೌಡ.—ಹಣ ಯಾವುದೂ ಲ್ಯಾಪ್ಸ್ ಆಗಿಲ್ಲ. ಈ ವರ್ಷ ಉಳಿದುದನ್ನು ಮುಂದಿನ ವರ್ಷ ಉಪಯೋಗಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ —ಜರೂರಾಗಿ ಏಕೆ ಒದಗಿಸಿಲ್ಲ ?

ಡಾ॥ ಆರ್. ನಾಗನಗೌಡ.—ಎಸ್ಟಿಮೇಟ್ ತಯಾರಾಗಬೇಕು, ಆ ತರುವಾಯ ಡಿಪಾಜಿಟ್ ಕಟ್ಟಬೇಕು. ಜಾಗ್ರತೆ ಕಟ್ಟುವುದಿಲ್ಲ. ಆದ್ದರಿಂದ ಸ್ವಲ್ಪ ನಿಧಾನವಾಗುತ್ತದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—Estimate ಮಂಜೂರಾಗಿದ್ದರೂ ಇನ್ನೂ ಕೆಲವು ಬಾವಿಗಳ ಕೆಲಸ ಪ್ರಾರಂಭಿಸಿಲ್ಲದೇ ಇರುವುದಕ್ಕೆ ಕಾರಣವೇನು ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ ; ಅದನ್ನು ಖರ್ಚುಮಾಡಲು ಈ ತಿಂಗಳು ಕೊನೆಯ ವರೆಗೂ ಅವಕಾಶವಿದೆ.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—1953-54ನೆಯ ಸಾಲಿಗೆ ಚಿಕ್ಕಮಗಳೂರು ಜಿಲ್ಲೆಗೆ ಕೇವಲ ಆರು ಬಾವಿಗಳಿಗೆ ಮಾತ್ರ ವಿದ್ಯುಚ್ಛಕ್ತಿ ಒದಗಿಸಿರುವುದು ಆ ಜಿಲ್ಲೆಯವರಿಗೆ ಬಹಳ ಅನ್ಯಾಯ ಮಾಡಿದಂತಾಗಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಚಿಕ್ಕಮಗಳೂರು ಜಿಲ್ಲೆಯವರು ಕೋರಾರ ಜಿಲ್ಲೆಯವರ ಹಾಗೆ ಕಷ್ಟಪಟ್ಟಿದ್ದರೆ ಇನ್ನೂ ಹೆಚ್ಚು ದೊರಕುತ್ತಿತ್ತು.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ಮಲೆನಾಡಿಗೆ ಹೆಚ್ಚಿನ ನಿಗಾ ಕೊಡಬೇಕಾದುದು ಅತ್ಯಗತ್ಯ. ಹೀಗಿದ್ದೂ ಇತ್ತೀಚೆಗೆ ಮೈಸೂರು ಸಂಸ್ಥಾನದೊಂದಿಗೆ ವಿಲೀನವಾದ ಬಳ್ಳಾರಿಗೆ 31 ಬಾವಿಗಳ ಎಸ್ಟಿಮೇಟ್ ಮಂಜೂರಾಗಿ ಚಿಕ್ಕಮಗಳೂರಿಗೆ ಇಷ್ಟು ಕಡಮೆ ಮಾಡಿರುವುದು ಸರಿಯೇ ?

ಡಾ॥ ಆರ್. ನಾಗನಗೌಡ.—ಬಹಳ ದಿವಸಗಳ ಆಸೆ ಇಟ್ಟುಕೊಂಡಿದ್ದ ಬಳ್ಳಾರಿಯವರು ಮೈಸೂರಿನೊಡನೆ ವಿಲೀನವಾದ ಮೇಲೆ, ಅವರನ್ನು ಇಪ್ಪೊಂದು ಪ್ರಿತ್ಯಾದರದಿಂದ ಬರಮಾಡಿಕೊಂಡಿರುವ ಪ್ರಾರಂಭದಲ್ಲಿ ಒಂದು ವೇಳೆ ಅವರಿಗೆ ಸ್ವಲ್ಪ ಜಾಸ್ತಿಯಾಗಿಯೇ ಕೊಟ್ಟರೂ ಮೈಸೂರಿನವರು ಆಕ್ಷೇಪಿಸಲಾರರು ಎಂದು ಅಂದುಕೊಂಡಿದ್ದೇನೆ.

ಶ್ರೀ ಜಿ. ಪುಟ್ಟಸ್ವಾಮಿ.—ಬೇಸಿಗೆ ಕಾಲದಲ್ಲಿ ಮೈದಾನ ಪ್ರದೇಶಕ್ಕಿಂತಲೂ ಮಲೆನಾಡಿನಲ್ಲಿ ಅಭಾವ ವಿದೆಯಲ್ಲವೇ ?

ಡಾ॥ ಆರ್. ನಾಗನಗೌಡ.—ನನಗೆ ಅನುಭವವಿಲ್ಲ. ಆದರೂ ತಾವು ಹೇಳುವುದು ಆಶ್ಚರ್ಯವಾಗಿದೆ ಅದನ್ನು ವಿಚಾರಿಸಬೇಕು.

ಶ್ರೀ ಜಿ. ಪುಟ್ಟಸ್ವಾಮಿ.—1954-55ನೆಯ ಸಾಲಿಗೆ ಈ ಭಾಗಕ್ಕೆ ಬಾವಿಗಳಿಗಾಗಿ ಎಷ್ಟು ಅರ್ಜಿಗಳು ಬಂದಿವೆ ?

ಡಾ॥ ಆರ್. ನಾಗನಗೌಡ.—ನನ್ನಲ್ಲಿ information ಇಲ್ಲ. ಅಂತೂ ಬಂದ ಅರ್ಜಿಗಳ ಬಗ್ಗೆ ಅಂದಾಜು ತಯಾರಾಗುತ್ತಿದೆ. ಈ ವಿಚಾರದಲ್ಲಿ ಆಲಸ್ಯವಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಮಲೆನಾಡು ಪ್ರದೇಶಕ್ಕೆ ಎಷ್ಟು ಬಾವಿಗಳು ಬೇಕೆಂಬ ಬಗ್ಗೆ ಸರ್ವೇ ಕಾರ್ಯಕ್ರಮ ನಡೆಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಇಲ್ಲ ; ಅಗತ್ಯ ಕಂಡು ಬಂದ ಹಾಗೆ, ಅರ್ಜಿಗಳು ಬಂದ ಹಾಗೆ ಆ ಬಗ್ಗೆ ಅಂದಾಜುಗಳನ್ನು ತಯಾರಿಸುತ್ತಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಕೋರಾರ ಜಿಲ್ಲೆಯವರು ಕಷ್ಟಪಟ್ಟರು, ಅವರಿಗೆ ಹೆಚ್ಚಾಗಿ ಬಾವಿಗಳ ಸಹಾಯ ದೊರಕಿತು ಎಂಬುದಾಗಿ ಈಗತಾನೇ ಉಪ ಪ್ರಶ್ನೆಯೊಂದಕ್ಕೆ ಮಂತ್ರಿಗಳು ಜವಾಬು ಕೊಟ್ಟರು. ಹಾಗಾದರೆ ಯಾರು ಹೆಚ್ಚಿಗೆ ಒತ್ತಾಯ ಮಾಡುತ್ತಾರೋ ಅವರಿಗೆ ಹೆಚ್ಚಿಗೆ ಕೊಡುವುದು ಸರ್ಕಾರದ ನೀತಿಯೇ ?

ಡಾ॥ ಆರ್. ನಾಗನಗೌಡ.—ಹಾಗಲ್ಲ ; ಕೋರಾರ ಜಿಲ್ಲೆಯಲ್ಲಿ ಬಹಳ ಕಷ್ಟಪರಿಸ್ಥಿತಿಯಿದ್ದು ಅಲ್ಲಿನ ರೈತರು ಬಹಳ ಮಟ್ಟಿಗೆ ಒತ್ತಾಯಪಡಿಸಿದ್ದರಿಂದಲೂ, ಅರ್ಜಿಗಳ ಮೂಲಕ ಅಲ್ಲಿನ ಡಿಮ್ಯಾಂಡ್ ಬಹಳ ಜಾಸ್ತಿಯಾಗಿದ್ದುದರಿಂದಲೂ, ಈ ಅರ್ಜಿಗಳ ಜೊತೆಗೆ ಅವರು ಡಿಪಾಜಿಟ್ ಮೊಬಲಗನ್ನು ಪಾವತಿಮಾಡಿದ್ದುದರಿಂದಲೂ, ಅವರಿಗೆ ಹೆಚ್ಚಿಗೆ ಕೊಟ್ಟಿದೆ.

ಶ್ರೀ ಜಿ. ಎ. ತಿಮ್ಮಪ್ಪಗೌಡ.—ಸರ್ಕಾರದವರು ಸಂಸ್ಥಾನದಲ್ಲಿ ಬಾವಿಗಳಿಗೆ ಈ ಪಂಪ್ ಸೆಟ್ಸ್ ಅವಶ್ಯಕತೆ ಎಲ್ಲೆಲ್ಲಿ ಎಷ್ಟರಮಟ್ಟಿಗೆ ಇದೆಯೆಂಬ ಬಗ್ಗೆ ಅಂಕಿ ಅಂಶಗಳನ್ನು ಶೇಖರಿಸಿ ಇವುಗಳನ್ನು ಒದಗಿಸುವ ಬಗ್ಗೆ ಒಂದು ನಿರ್ಧಾರಕ್ಕೆ ಬಂದಿದ್ದೀರಾ ?

ಡಾ॥ ಆರ್. ನಾಗನಗೌಡ.—ಈ ವಿಚಾರವನ್ನು ದೀರ್ಘವಾಗಿ ಆಲೋಚನೆ ಮಾಡುವುದು ಅಗತ್ಯ ; ಪ್ರಯತ್ನಪಡುತ್ತೇನೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಮಲೆನಾಡಿನಲ್ಲಿ ನೀರು ಯಥೇಚ್ಛವಾಗಿರುವ ಬಾವಿಗಳಿಗೆ ಪಂಪ್ ಸೆಟ್ಸ್ ಒದಗಿಸದೇ ಬೇರೆ ಕಡೆಗಳಲ್ಲಿ ಒದಗಿಸಿ ಕರೆಂಟ್ ಕೊಟ್ಟಿರುವುದರ ಉದ್ದೇಶವೇನು ?

ಡಾ॥ ಆರ್. ನಾಗನಗೌಡ.—ಈ ವಿಚಾರದಲ್ಲಿ ತಪ್ಪಭಿಪ್ರಾಯಕ್ಕೆ ಎಡೆಗೊಡಬಾರದು. ಎಲ್ಲಿ ಅವಶ್ಯಕತೆಯ ಬಗ್ಗೆ ಒತ್ತಾಯ ಜಾಸ್ತಿಯಾಗಿ ಬರುತ್ತದೆಯೋ ಅಲ್ಲಗೆ ಕೊಡಲಾಗುತ್ತಿದೆ. ಕೋಲಾರದಲ್ಲಿರುವಷ್ಟು demand ಮಲೆನಾಡು ಪ್ರದೇಶದಲ್ಲಿಲ್ಲ. ಆದರೂ ಸಾಧ್ಯವಾದಷ್ಟು ಒದಗಿಸುವ ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಎಚ್. ಮುಡಲಗಿರಿಗೌಡ.—ಈ ಬಗ್ಗೆ ತುಮಕೂರು ಡಿಸ್ಟ್ರಿಕ್ಟಿನಿಂದ ಎಷ್ಟು ಅರ್ಜಿಗಳು ಬಂದಿವೆ ?

Mr. SPEAKER.—That question does not arise.

Mekedatu Electrical Project

Q.—687. Sri K. LAKKAPPA (Chennarayapatna).—

Will the Government be pleased to state :—

(*a*) whether any survey has been made regarding Mekedatu Electrical Project ;

(*b*) how much was spent on survey work ;

(*c*) what may be the estimated cost of this project ;

(*d*) how much power they expect from this project ;

(*e*) whether they propose to take up this project ?

A.—Dr. R. NAGAN GOWDA (Minister for Agriculture).—

(*a*) Yes.

(*b*) Rs. 97,632.

(*c*) Rs. 440 lakhs for first stage.

(*d*) 22,000 K. W. First Stage ; 40,500 K. W. Second Stage.

(*e*) The matter is under consideration.

ಶ್ರೀ ಕೆ. ಲಕ್ಕಪ್ಪ.—ಈ ಮೇಕೆದಾಟು ಪ್ರಾಜೆಕ್ಟ್ ವಿಚಾರವಾಗಿ ಮದ್ರಾಸ್ ಸರ್ಕಾರದೊಡನೆ ಮಾತುಕತೆ ಜರುಗಿಸಿದ್ದೀರಾ ?

ಡಾ॥ ಆರ್. ನಾಗನಗೌಡ.—ಜರುಗಿಸಿದೆ.

ಶ್ರೀ ಕೆ. ಲಕ್ಕಪ್ಪ.—ಮದ್ರಾಸ್ ಸರ್ಕಾರದವರೇನಾದರೂ ಈ ವಿಚಾರದಲ್ಲಿ ನಮ್ಮ ಮೇಲೆ condition ಹೊರಿಸಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಈ ವಿಚಾರ ಇನ್ನೂ discussion stageನಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಈ ಪ್ರಾಜೆಕ್ಟ್ ಕೈಗೊಂಡರೆ ಆದರಿಂದ ಮದ್ರಾಸ್ ಸರ್ಕಾರಕ್ಕೆ ಪವರ್ ನಷ್ಟೆಶ್ತಿ ಮಾಡಬೇಕೆಂದು ಕೇಳಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಅವರು ತಮಗೆ ಬೇಕಾದ ಅನುಕೂಲತೆಗಳನ್ನೆಲ್ಲಾ ಕೇಳುತ್ತಿದ್ದಾರೆ. ಆದರೆ ಈ ಪ್ರಾಜೆಕ್ಟ್ ತೆಗೆದುಕೊಳ್ಳುವ ವಿಚಾರವೇ ಇನ್ನೂ consideration stageನಲ್ಲಿದೆ.

ಶ್ರೀ ಕೆ. ಲಕ್ಕಪ್ಪ.—ಮೇಕೆದಾಟು ಪ್ರಾಜೆಕ್ಟ್ ನೂಕ್ತವೇ ಅಥವಾ ಹೊನ್ನೇಮರಡು ಪ್ರಾಜೆಕ್ಟ್ ನೂಕ್ತವೇ ಎಂಬ ವಿಚಾರದಲ್ಲಿ ತಜ್ಞರ ಅಭಿಪ್ರಾಯವೇನು ?

ಡಾ॥ ಆರ್. ನಾಗನಗೌಡ.—ಹೊನ್ನೇಮರಡು ಪ್ರಾಜೆಕ್ಟ್ ಇದಕ್ಕಿಂತಲೂ ಅನುಕೂಲ ಎಂಬುದು ಈಗಿನ ಅಭಿಪ್ರಾಯ.

ಶ್ರೀ ಕೆ. ಲಕ್ಕಪ್ಪ.—ಈ ಹೊನ್ನೇಮರಡು ಪ್ರಾಜೆಕ್ಟಿಗೆ ವಿಪರೀತ ಹಣ ಖರ್ಚಾಗುತ್ತದೆ, ಆದಕಾರಣ ಕಡಮೆ ಖರ್ಚಾಗುವ ಬೇರೊಂದು ಪ್ರಾಜೆಕ್ಟ್ ಕಳುಹಿಸಿಕೊಡಿ ಎಂಬುದಾಗಿ ಕೇಂದ್ರ ಸರ್ಕಾರದವರು ಕೇಳಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ಕೇಂದ್ರ ಸರ್ಕಾರದವರು ಅನೇಕ ಸೂಚನೆಗಳನ್ನು ಕೊಟ್ಟಿರುತ್ತಾರೆ. ಆ ಬಗ್ಗೆ ಅಂಕಿಅಂಶಗಳನ್ನು ತಯಾರಿಸಿ ಅವರ ಮುಂದೆ ಇಡುತ್ತೇನೆ.

Mr. SPEAKER.—Some of them may be confidential. It is better we do not discuss about them in detail.

National Extension Scheme

Q.—691. Sri K. LAKKAPPA (Chennarayapatna).—

Will the Government be pleased to state :—

(*a*) whether the National Extension Scheme is extended to the State ; if so, when ;

(*b*) the steps they have taken so far to implement this scheme ;

(*c*) whether any committees were constituted in each district to propose the area to be selected for the launching of this scheme ;

(*d*) what are the areas proposed in their districts by these committees ;

(*e*) what are the areas selected by the Government ?

A.—Dr. R. NAGAN GOWDA (Minister for Agriculture).—

(*a*) Yes. Seven National Extension Service Blocks were inaugurated on 2nd October 1953. [List given in answer to sub-question (*e*)]

(*b*) Seven block Development Officers are appointed to assist the Sub-Division Officers who are in charge of these Blocks. Works programme are